3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಸಿ.ಸಿ.ನಂ. 699/2019

ದಿನಾಂಕಃ 07.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ರತ್ನಮ್ಮ ಅಲಿಯಾಸ್ ಕೊಂತಮ್ಮ | ಚಾಸಾ-7, ಪ್ರಾಸ.-7 |
| ಗಂಡನ ಹೆಸರು ಃ | ಚಂದ್ರಪ್ಪ | |
| ವಯಸ್ಸು ಃ | 32 ವರ್ಷ | |
| ಉದ್ಯೋಗ ಃ | ಕೂಲಿ | |
| ವಾಸ ಃ | ಹಿರೇನಲ್ಲೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ನನ್ನ ಅಣ್ಣ. ಚಾಸಾ-2 ನನ್ನ ಗಂಡ. ಚಾಸಾ-8 ನನ್ನ ಮಗಳು. ಸುಮಾರು 8 ವರ್ಷಗಳ ಹಿಂದೆ ನನ್ನ ಗಂಡ 1 ನೇ ಆರೋಪಿಗೆ ರೂ. 20 ಸಾಲವನ್ನು ಮರುಪಾವತಿಸಲು ಬಾಕಿ ಇದ್ದು ಸದರಿ ಹಣವನ್ನು ವಾಪಸ್ಸು ನೀಡುವಂತೆ 1 ನೇ ಆರೋಪಿ ಕೇಳಿದಾಗ ಚಾಸಾ-2 ರವರು ನನ್ನ ಬಳಿ ಚಿಲ್ಲರೆ ಇಲ್ಲಾ 5 ನಿಮಿಷದ ನಂತರ ತಂದು ಕೊಡುತ್ತೇನೆ ಎಂದು ಹೇಳಿರುತ್ತಾರೆ. ನೀನು 20 ರೂ ಕೊಡದಿದ್ದರೂ ಪರವಾಗಿಲ್ಲ ಬಾ ಇಲ್ಲಿ ಎಂದು ಕರೆದು ತಿಮ್ಮಣ್ಣನ ಹೋಟೆಲ್ ಹಿಂಭಾಗ ಕರೆದುಕೊಂಡು ಹೋಗಿ ಅಲ್ಲಿ ಬಿದ್ದಿದ್ದ ಬೀಯರ್ ಬಾಟಲ್ ನಿಂದ ಚಾಸಾ-2 ರವರ ಎದೆಗೆ, ಬೆನ್ನಿಗೆ ಹಲ್ಲೆ ಮಾಡಿ ರಕ್ತಗಾಯ ಮಾಡಿರುತ್ತಾರೆ. ಬಲಗೈಗೆ ಬಾಟಲಿಯಿಂದ ಹಲ್ಲೆ ಮಾಡಿರುತ್ತಾರೆ. ಗಾಯಗೊಂಡ ನನ್ನ ಗಂಡನನ್ನು ಚಾಸಾ-1 ರವರು ಮನೆಯಲ್ಲಿದ್ದ ನಮಗೆ ವಿಚಾರ ತಿಳಿಸಿದಾಗ ನಾನು, ಚಾಸಾ-1 ಮತ್ತು 8 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ-2 ರವರು ಅಂಗಾತ ಬಿದ್ದಿದ್ದರು. ಅವರ ಎದೆಯ ಒಳಗಡೆ ಬೀಯರ್ ಬಾಟಲ್ ಇತ್ತು. ನಾವುಗಳು ಆತನನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಅಲ್ಲಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ರವಾನಿಸಿರುತ್ತಾರೆ. ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಪರ ವಕೀಲರು ಆತನ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ 21.06.2017 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಗಲಾಟೆಯೂದ ವಿಚಾರವನ್ನು ಚಾಸಾ-1 ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ಚಾಸಾ-1 ರವರು ಬೀರೂರು ಪೋಲಿಸರಿಗೆ ದೂರು ನೀಡಿರುತ್ತಾರೆ ಎಂದರೆ ಸರಿ.

ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎಂ. ಬಿ ವಕೀಲರಿಂದಃ

ಗಲಾಟೆಯು ಯಾವ ದಿನಾಂಕದಂದು ನಡೆಯಿತು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಘಟನೆಯು ಮಧ್ಯಾಹ್ನ 3.00 ರಿಂದ 3.30 ರ ಸಮಯದಲ್ಲಿ ನಡೆದಿರಬಹುದು. ನನ್ನ ಊರು ಹಿರೆನಲ್ಲೂರು. ನನ್ನ ಮನೆಯಿಂದ ಘಟನಾ ಸ್ಥಳಕ್ಕೆ ಸುಮಾರು 20 ಅಡಿ ಅಂತರ ಇರಬಹುದು. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಹೋಗಲು ಓಣಿಗಳು ಇರುತ್ತದೆ ಎಂದರೆ ಸರಿ. ನಿಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಹೋಗಲು ಎಷ್ಟು ಗಲ್ಲಿಗಳು ಇರುತ್ತದೆ ಎಂದರೆ ಸಾಕ್ಷಿ ಎರಡು ಹಿತ್ತಲು ದಾಟಿದರೆ ಘಟನಾ ಸ್ಥಳ ಇರುತ್ತದೆ ಎಂದು ನುಡಿಯುತ್ತಾರೆ. ಚಾಸಾ-2 ರವರಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ. ನನ್ನ ಗಂಡ ಕುಡಿದು ಗೋಡೆಗೆ ತಾಗಿಸಿಕೊಂಡು ಬಿದ್ದು ಗಾಯಪಡಿಸಿಕೊಂಡಿರುತ್ತಾರೆ ಹೊರತು ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಮತ್ತು ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆಯನ್ನು ನಾನು ಖುದ್ದು ನೋಡಿರುವುದಿಲ್ಲ ಚಾಸಾ-1 ರವರು ತಿಳಿಸಿರುತ್ತಾರೆ. ನನ್ನ ಅಣ್ಣನ ಊರು ನರೇನಲ್ಲೂರು. ನನ್ನನ್ನು ಮೈಸೂರಿಗೆ ಮದುವೆ ಮಾಡಿರುತ್ತಾರೆ. ಮದುವೆಯಾಗಿ 5 ತಿಂಗಳುಗಳ ಕಾಲ ನಾನು ಗಂಡನ ಮನೆಯಲ್ಲಿ ಸಂಸಾರ ಮಾಡಿ ನನ್ನ ತವರು ಮನೆಗೆ ಬಂದಿರುತ್ತೇನೆ. ನಾನು ನನ್ನ ಅಣ್ಣನ ಮನೆಯಲ್ಲಿ ವಾಸವಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮತ್ತು ಚಾಸಾ-1 ರವರು ಆರೋಪಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ತಿಮ್ಮಣ್ಣನ ಹೋಟೆಲ್ ಬೆಳಗ್ಗೆ 8.00 ರಿಂದ ರಾತ್ರಿ 10.00 ಗಂಟೆಗೆ ಮುಚ್ಚುತ್ತಾರೆ. ಸದರಿ ಹೋಟೆಲ್ ಗೆ ಸಾರ್ವಜನಿಕರು ಬಂದು ಹೋಗುತ್ತಾರೆ ಎಂದರೆ ಇರಬಹುದು ಸಾಕ್ಷಿ ಮುಂದುವರೆದು ಘಟನೆ ಹೋಟೆಲ್ ಹಿಂಭಾಗದಲ್ಲಿ ನಡೆದಿರುತ್ತದೆ ಎಂದು ನುಡಿಯುತ್ತಾರೆ. ತಿಮ್ಮಣ್ಣರವರ ಹೋಟೆಲ್ ಹಿಂಭಾಗದ ರಸ್ತೆಯು ಸಾರ್ವಜನಿಕ ರಸ್ತೆಯಾಗಿದ್ದು ಅಲ್ಲಿ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬೀಯರ್ ಬಾಟಲುಗಳು ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸರಿ. ಆರೋಪಿಗಳು ಚಾಸಾ-2 ರವರಿಗೆ ಹಲ್ಲೆ ಮಾಡಿರುವುದಿಲ್ಲ ಮತ್ತು ಅವ್ಯಾಚ್ಯವಾಗಿ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರನ್ನು ಬೀರೂರು ಆಸ್ಪತ್ರೆಗೆ ಸಂಜೆ 6.00 ಗಂಟೆಗೆ ಕರೆದುಕೊಂಡು ಹೋಗಿರುತ್ತೇವೆ. ಬೀರೂರು ಆಸ್ಪತ್ರೆಗೆ ಎಷ್ಟು ಗಂಟೆಗೆ ತಲುಪಿರುತ್ತೇವೆ ಎಂದು ನನಗೆ ಹೇಳಲಾಗುವುದಿಲ್ಲ ಸಾಕ್ಷಿ ನನ್ನ ಗಂಡನಿಗೆ ಗಾಯವಾಗಿದ್ದರಿಂದ ಸಮಯ ನೊಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಹಲ್ಲೆಯನ್ನು ಮಾಡದಿದ್ದರೂ ನನ್ನ ಗಂಡನ ಕುಡಿತದ ಚಟದಿಂದ ಬಿದ್ದು ಗಾಯಗೊಂಡ ಚಾಸಾ-2 ರವರನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

( 1 ನೇ ಆರೋಪಿ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ )

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.